
**ಅಪ್ಪ:** ಮಗನೇ, ನಿನ್ನನ್ನು ದತ್ತು ತೆಗೆದುಕೊಳ್ಳಲಾಗಿದೆ.
**ಗುಂಡ:** ಅದೇ ಮತ್ತೆ... ನೀವು ನನ್ನನ್ನು ನೋಡಿಕೊಳ್ಳುವ ರೀತಿಯಿಂದ ನನಗೆ ಮೊದಲೇ ಸಂಶಯವಿತ್ತು. ಸರಿ, ನನಗೂ ನನ್ನ ನಿಜವಾದ ಅಪ್ಪ ಅಮ್ಮನನ್ನು ನೋಡುವ ಕಾತುರ ಇದೆ.
**ಅಪ್ಪ:** ಅಯೋಗ್ಯ, ನಾವೇ ನಿನ್ನ ನಿಜವಾದ ಹೆತ್ತವರು ಕಣೋ. ಹೊಸ ಅಪ್ಪ ಅಮ್ಮ ಇನ್ನೊಂದರ್ಧ ಗಂಟೆಯಲ್ಲಿ ಬರುತ್ತಾರೆ. ನಿನ್ನ ಬಟ್ಟೆಗಳನ್ನೆಲ್ಲ ಪ್ಯಾಕ್ ಮಾಡಿ ಹೊರಡಲು ತಯಾರಾಗು.

**ಗುಂಡಮ್ಮ:** ಈ ವಾಟ್ಸ್‌ಆ್ಯಪ್, ಫೇಸ್‌ಬುಕ್ ಎಲ್ಲಾ ಸಮಯಹರಣ ಮಾಡುತ್ತದೆ. ಆದ್ದರಿಂದ ಅವುಗಳನ್ನು ಬಿಟ್ಟುಬಿಡಕು ಎಂದಿದ್ದೇನೆ.
**ಗುಂಡ:** ನಿನ್ನ ಈ ಯೋಚನೆಯೇನೋ ಒಳ್ಳೆಯದೇ. ಆದರೆ ಇನ್ನೊಮ್ಮೆ ಯೋಚಿಸಿ ನೋಡು. ಈ ವಯಸ್ಸಿನಲ್ಲಿ ಯಾರು ತಾನೇ ನಿನ್ನನ್ನು ಬ್ಯೂಟಿಫುಲ್, ಮುದ್ದಾಗಿ ಕಾಣಿಸುತ್ತಿರುವೆ, ಗಾರ್ಜಿಯಸ್.. ಎಂದೆಲ್ಲಾ ಹೊಗಳುತ್ತಾರೆ?
**ಗುಂಡಮ್ಮ:** ಯಾಕ್ರೀ ಸೀರಿಯಸ್ ಆಗ್ತೀರಾ? ನಾನು ತಮಾಷೆಗೆ ಹಾಗೆ ಅಂದಿದ್ದು.



ಅವನು ನಮ್ಮಾಫೀಸಿನ ಜವಾನ.....
ಇವತ್ತು ತಿಂಗಳ ಸಂಬಳ ಕೈಗೆಸಿಕ್ಕಿದೆ.




**ಪುಂಡ:** ಸ್ವರ್ಗ, ನರಕ ಎರಡಕ್ಕೆ ಇರುವ ವ್ಯತ್ಯಾಸ ಏನು?
**ಗುಂಡ:** ಅಮೆರಿಕದ ಸಂಬಳ, ಬ್ರಿಟನ್ನಿನ ಮನೆ, ಚೀನಾದ ಆಹಾರ ಮತ್ತು ಭಾರತೀಯ ಪತ್ನಿ ಇದ್ದರೆ ಭೂಲೋಕದಲ್ಲೇ ಬಾಳು ಸ್ವರ್ಗ ಮತ್ತು ಇದಕ್ಕೆ ತದ್ವಿರುದ್ಧವಾಗಿ ಅಮೆರಿಕನ್ ಪತ್ನಿ, ಬ್ರಿಟನ್ನಿನ ಆಹಾರ, ಚೀನಾದ ಮನೆ ಮತ್ತು ಭಾರತದ ಸಂಬಳ ಇದ್ದರೆ ಭೂಲೋಕದಲ್ಲೇ ನರಕ ಕಾಣಬಹುದು ಮಾರಾಯ.

ಗುಂಡನ ರಿಸೈನ್‌ಲೆಟರ್ ಇಟ್ಟಿದ್ದ ಪರ್ಸ್ ಅನ್ನು ಆಫೀಸ್‌ನಲ್ಲಿ ಬಾಸ್ ಕಳೆದುಕೊಂಡಿದ್ದರು. ಅದಕ್ಕಾಗಿ ಬಾಸ್ ತಮ್ಮ ಸಿಬ್ಬಂದಿಯನ್ನು ಕರೆದು ಹೀಗೊಂದು ಸೂಚನೆಯಿತ್ತರು...
**ಬಾಸ್:** ನನ್ನ ಪರ್ಸ್ ಕಳೆದು ಹೋಗಿದೆ. ಅದರೊಳಗೆ 5 ಸಾವಿರ ರೂಪಾಯಿಗಳಿದ್ದವು. ತಂದುಕೊಟ್ಟವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ಹಾಗೂ ರಾತ್ರಿ ಪ್ರತಿಷ್ಠಿತ ಹೋಟೆಲ್‌ನಲ್ಲಿ ಊಟ ಕೊಡಿಸಲಾಗುವುದು.
ಅದನ್ನು ಕೇಳಿದ ಗುಂಡ ತನ್ನ ಕೀರಲು ಧ್ವನಿಯಲ್ಲಿ ಹೀಗೆ ಮೆಲ್ಲನುಸುರಿದ.
**ಗುಂಡ:** ಅದನ್ನು ನನಗೆ ತಂದು ತಂದುಕೊಟ್ಟವರಿಗೆ ಎರಡು ಸಾವಿರ ರೂಪಾಯಿ ಬಹುಮಾನ ಹಾಗೂ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಒಂದು ವಾರ ಉಚಿತವಾಗಿ ಉಳಿಯಲು ಅವಕಾಶ ಕಲ್ಪಿಸಲಾಗುವುದು.

ಕಾಲೇಜು ಕನ್ನೆ ಸ್ಮಿತಾ, ರಸ್ತೆ ಬದಿಯಲ್ಲಿ ಭಿಕ್ಷುಕನೊಬ್ಬ ಬೇಡುತ್ತಿರುವುದನ್ನು ನೋಡಿಯೂ ನೋಡದಂತೆ ಮುಂದೆ ಸಾಗುತ್ತಿದ್ದಳು. ಅವಳನ್ನು ಗಮನಿಸಿದ ಆ ಭಿಕ್ಷುಕ ಕೀಟಲೆಯ ದನಿಯಲ್ಲಿ ಹೇಳಿದ, 'ಏನ್ ಮೇಡಂ, ಫೇಸ್‌ಬುಕ್‌ನಲ್ಲಿ ನಂಜೊತೆ ಗಂಟೆಗಟ್ಟಲೆ ಚಾಟಿಂಗ್ ಮಾಡ್ತೀರಿ. ಈಗ ಎದುರಿಗೆ ಬಂದ್ರೂ ನೋಡಿಯೂ ಮಾತಾಡಿಸದೆ ಹೋಗ್ತಿದ್ದೀರಿ' ಎಂದ.

ಗುಂಡ ಮತ್ತು ಪುಂಡ ಇಬ್ಬರೂ ಮುಂಬೈನ ಲೋಕಲ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು.
**ಗುಂಡ:** ಈ ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳು ಮಾನವನನ್ನು ತುಂಬಾ ಮುಂದಕ್ಕೆ ತಂದು ನಿಲ್ಲಿಸುತ್ತವೆ.
**ಪುಂಡ:** ಅದು ಹೇಗೆ?
ಗುಂಡ: ಉದಾಹರಣೆಗೆ ನನ್ನನ್ನೇ ತೆಗೆದುಕೊ. ನಾನು ಎರಡು ಸ್ಟೇಷನ್ ಮೊದಲೇ ಇಳಿಯಬೇಕಿತ್ತು.



ಶಿಕ್ಷಣದಲ್ಲಿ ಕೇರಳ 100ಶೇ. ಯಾಕೆ ಅಂತ ಈಗ ಗೊತ್ತಾಯ್ತು!

ಇತಿಹಾಸ ಪರೀಕ್ಷಾ ಪ್ರಶ್ನೆಪತ್ರಿಕೆಯಲ್ಲಿ ಹೀಗೊಂದು ಪ್ರಶ್ನೆ... 'ರಾಣಿ ಲಕ್ಷ್ಮೀಬಾಯಿ ಬಗ್ಗೆ 4 ವಾಕ್ಯ ಬರೆಯಿರಿ'.
ಗುಂಡ ಹೀಗೆ ಬರೆದ... 'ಹುಡುಗಿಯರು ತವರು ಮನೆಯಲ್ಲಿ 'ರಾಣಿ' ತರಹ ಇರುತ್ತಾರೆ. ವಿವಾಹದ ನಂತರ ಅತ್ತೆ ಮನೆಗೆ ಆಗಮಿಸುವಾಗ 'ಲಕ್ಷ್ಮಿ'ಯಂತೆ ಸ್ವಾಗತಿಸಲ್ಪಡುತ್ತಾರೆ. ಕ್ರಮೇಣ ಅಡುಗೆ, ಬಟ್ಟೆ ಒಗೆಯುವುದು, ಮನೆಯನ್ನು ಶುಚಿಗೊಳಿಸುವುದು ಮತ್ತಿತರ ಕೆಲಸಗಳಿಂದಾಗಿ ಮನೆಕೆಲಸದ ಬಾಯಿಯಾಗುತ್ತಾರೆ. ಹೀಗೆ ಹುಡುಗಿಯರು ತಮ್ಮ ಜೀವನದಲ್ಲಿ 'ರಾಣಿ ಲಕ್ಷ್ಮೀಬಾಯಿ'ಯೆಂದೆನಿಸಿಕೊಳ್ಳುತ್ತಾರೆ.

ಕೆಂಪು ಸಿಗ್ನಲ್ ದಾಟಿ ಸಂಚರಿಸಿದ್ದಕ್ಕಾಗಿ ಗುಂಡನನ್ನು ಟ್ರಾಫಿಕ್ ಪೊಲೀಸ್ ಅಧಿಕಾರಿ ತಡೆದು ಹೀಗೆ ಪ್ರಶ್ನಿಸಿದರು...
**ಪೊಲೀಸ್:** ಏಕೆ, ಕೆಂಪು ಸಿಗ್ನಲ್ ಕಾಣಿಸಲಿಲ್ಲವೇ?
**ಗುಂಡ:** ಸಿಗ್ನಲ್ ಏನೋ ಕಾಣಿಸಿತ್ತು, ಆದರೆ ನೀವು ಆ ಮರದ ಹಿಂದೆ ಬಚ್ಚಿಟ್ಟುಕೊಂಡಿದ್ದು ಕಾಣಿಸಲಿಲ್ಲ ಸರ್!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ, ಮುಂಬೈ